KABK200011442023

<u>ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ</u>

<u>ದಂಡಾಧಿಕಾರಿಗಳವರ ನ್ಯಾಯಾಲಯ, ಮುಧೋಳ</u>

ಉಪಸ್ಥಿತರು: ಶ್ರೀ ವಿಜಯಕುಮಾರ.ಎಮ್.ಕನ್ನೂರು,
ಬಿ.ಎ.ಎಲ್.ಎಲ್.ಬಿ. (ಸ್ಪೇಷಲ್)
ಹಿರಿಯ ದಿವಾಣಿ ನ್ಯಾಯಾಧೀಶರು ವ ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಮುಧೋಳ.

ಸಕ್ರಮ ಮೇಲ್ಮನವಿ ಸಂಖ್ಯೆಃ **07/2023**

VIJAYAKUMAR KANNUR

Digitally signed by VIJAYAKUMAR KANNUR
Date: 2025.07.11 16:49:44 +0530

ದಿನಾಂಕಃ **08** ನೇ ಜುಲೈ **2025**

<u>ಮೇಲ್ಮನವಿದಾರರು</u>

1. ಶ್ರೀಮತಿ.ಅನ್ನಪೂರ್ಣ ಗಂಡ ಸಂಕ್ರಯ್ಯಾ ಗೋವಿಂದಪೂರಮಠ,
ವಯಾಃ 80 ವರ್ಷ, ಉಃ ಮನೆಗೆಲಸ,
ಸಾಃ ಗೋವಿಂದಪೂರ ಗಲ್ಲಿ., ತಾಃ ಮುಧೋಳ,
ಜಿಃ ಬಾಗಲಕೋಟ.

2. ಶ್ರೀ.ಕಾಶೀನಾಥ ತಂದೆ ಸಂಕ್ರಯ್ಯಾ ಗೋವಿಂದಪೂರಮಠ,
ವಯಾಃ 60 ವರ್ಷ, ಉಃ ಚಾಲಕ,
ಸಾಃ ಗೋವಿಂದಪೂರ ಗಲ್ಲಿ.
ತಾಃ ಮುಧೋಳ, ಜಿಃ ಬಾಗಲಕೋಟ.

3. ಶ್ರೀಮತಿ.ಸುಷ್ಮಾ ಗಂಡ ವಿಶ್ವನಾಥ ಗೋವಿಂದಪೂರಮಠ,
ವಯಾಃ 42 ವರ್ಷ, ಉಃ ಮನೆಗೆಲಸ,
ಸಾಃ ಗೋವಿಂದಪೂರ ಗಲ್ಲಿ.
ತಾಃ ಮುಧೋಳ, ಜಿಃ ಬಾಗಲಕೋಟ.

4. ಶ್ರೀ.ಅಭಿಷೇಕ ತಂದೆ ವಿಶ್ವನಾಥ ಗೋವಿಂದಪೂರಮಠ,
ವಯಾಃ 21 ವರ್ಷ, ಉಃ ವಿದ್ಯಾರ್ಥಿ,
ಸಾಃ ಗೋವಿಂದಪೂರ ಗಲ್ಲಿ.
ತಾಃ ಮುಧೋಳ, ಜಿಃ ಬಾಗಲಕೋಟ.

(ಮೇಲ್ಮನವಿದಾರರ ಪರವಾಗಿ ಶ್ರೀ. ಎಮ್.ಬಿ.ಎಚ್, ನ್ಯಾಯವಾದಿಗಳು)

- - ವಿರುದ್ಧ - -

ಎದುರುದಾರರು:

1. ಶ್ರೀ.ಪರಯ್ಯಾ ತಂದೆ ಈರ್ತಯ್ಯ ಗೋವಿಂದಪೂರಮಠ,
ವಯಾ: 82 ವರ್ಷ, ಉ: ನಿವೃತ್ತ ಶಿಕ್ಷಕ,
ಸಾ: ಗೋವಿಂದಪೂರ ಗಲ್ಲಿ.
ತಾ: ಮುಧೋಳ, ಜಿ: ಬಾಗಲಕೋಟ.

2. ಶ್ರೀಮತಿ.ದ್ರಾಕ್ಷಾಯನಿ ಗಂಡ ಗುರುಪಾದಯ್ಯ ಹಿರೇಮಠ,
ವಯಾ: 62 ವರ್ಷ, ಉ: ಮನೆಗೆಲಸ,
ಸಾ: ಅಸ್ಟಾ, ತಾ ಮತ್ತು ಜಿ: ಸಾಂಗಲಿ.

3. ಶ್ರೀಮತಿ.ಸುರೇಖಾ ಗಂಡ ಕರಬಸಯ್ಯ ಹಿರೇಮಠ,
ವಯಾ: 50 ವರ್ಷ, ಉ: ಮನೆಗಲಸ,
ಸಾ: ಬಳ್ಳೂರ ಆರ್.ಸಿ.
ತಾ: ಮುಧೋಳ, ಜಿ: ಬಾಗಲಕೋಟ.

(ಎದುರುದಾರ 1 ರ ಪರ ಶ್ರೀ.ಐ.ಎಚ್.ಎ ವಕೀಲರು
ಎದುರುದಾರ 2 ಮತ್ತು 3 ರವರು ಗೈರಹಾಜರಾಗಿರುವರು)

ಮಧ್ಯಂತರ ಅರ್ಜಿ ಸಂಖ್ಯೆ: 1 ರ ಮೇಲಿನ ಆದೇಶ

ಸದರಿ ಮೇಲ್ಮನವಿದಾರರು ವಿಚಾರಣಾ ನ್ಯಾಯಲಯದಲ್ಲಿ ಅಸಲ ದಾವಾ ಸಂಖ್ಯೆ:249/2013 ರಲ್ಲಿ ಪ್ರತಿವಾದಿಯರಾಗಿದ್ದು, ವಿಚಾರಣಾ ನ್ಯಾಯಾಲಯವು ಅಸಲು ದಾವಾ ಸಂಖ್ಯೆ:249/2013 ನ್ನು ಭಾಗಶಃ ಡಿಕ್ರಿಗೊಳಿಸಿದ್ದು, ಈ ತೀರ್ಪು ಮತ್ತು ಡಿಕ್ರಿಯ ವಿರುದ್ದ ಈ ಮೇಲ್ಮನವಿಯನ್ನು ಸಲ್ಲಿಸಲು ಮೇಲ್ಮನವಿದಾರರಿಗೆ 1516 ದಿನಗಳ ವಿಳಂಬವಾಗಿದ್ದು, ಸದರಿ ವಿಳಂಬವನ್ನು ಮನ್ನಿಸುವ ಕುರಿತಂತೆ ಸದರಿ ಅರ್ಜಿಯನ್ನು ಕಾಲ ಪರಿಮಿತಿ ಅಧಿನಿಯಮ ಕಲಂ.5 ರಡಿಯಲ್ಲಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವರು.

**2.** ಸದರಿ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ವಾದಿಯು ಹೇಳುವುದೇನೆಂದರೆ, ಮೇಲ್ಮನವಿದಾರರ ವಿರುದ್ದ ಎದುರುದಾರ ಪ್ರಧಾನ ಸಿವಿಲ್ ಮತ್ತು

ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಅಸಲ ದಾವಾ ಸಂಖ್ಯೆ: **249/2013** ರ ದಾವೆಯನ್ನು ಅವಶ್ಯಕತೆಯ ಅನುಭೋಗದ ದಾರಿಯ ಹಕ್ಕಿನ ಘೋಷಣೆಗಾಗಿ ಮತ್ತು ಆ ಹಕ್ಕಿಗೆ ಸಂಬಂಧಪಟ್ಟಂತೆ ಅಡೆತಡೆ ಉಂಟುಮಾಡಂತೆ ಶಾಶ್ವತ ನಿರ್ಬಂಧಕಾಜ್ಞೆಗಾಗಿ ಕೋರಿ ದಾವೆಯನ್ನು ಸಲ್ಲಿಸಿದ್ದು, ವಿಚಾರಣಾ ನ್ಯಾಯಲಯವು ಸದರಿ ದಾವೆಯನ್ನು ದಿನಾಂಕ: **27.02.2019** ರಂದು ಭಾಗಶಃ ಡಿಕ್ರಿ ಮಾಡಿದ್ದು, ಆದರೆ ಮೇಲ್ಮನವಿದಾರರಿಗೆ ಈ ಮೇಲ್ಮನವಿಯನ್ನು ಕಾಲಪರಿಮಿತಿಯಲ್ಲಿ ಸಲ್ಲಿಸಲು ಆಗಿರುವುದಿಲ್ಲ. ಏಕೆಂದರೆ ಪ್ರತಿವಾದಿಯರಿಗೆ ಆರ್ಥಿಕವಾಗಿ ಸಂಕಷ್ಟವಿರುವುದರಿಂದ ಈ ನ್ಯಾಯಾಲಯದ ಶುಲ್ಕ ಮತ್ತು ವಕೀಲರ ಫೀಯನ್ನು ಕೊಡಲು ಸಾಧ್ಯವಾಗದೇ ಇರುವುದರಿಂದ ಈ ಮೇಲ್ಮನವಿಯನ್ನು ಸಲ್ಲಿಸಲು 1516 ದಿನಗಳ ವಿಳಂಬವಾಗಿದ್ದು, ಆದ್ದರಿಂದ ಈ ವಿಳಂಬವು ಯಾವುದೇ ಉದ್ದೇಶಪೂರ್ವಕವಾಗದೇ ಇರುವುದರಿಂದ ಈ ಅರ್ಜಿಯನ್ನು ಪುರಸ್ಕರಿಸಿ ವಿಳಂಬವನ್ನು ಮನ್ನಾ ಮಾಡುವಂತೆ ವಿನಂತಿಸಿರುತ್ತಾರೆ.

3. ಸದರಿ ಮಧ್ಯಂತರ ಅರ್ಜಿ 1 ಕ್ಕೆ ಎದುರುದಾರನು ತನ್ನ ತಕರಾರನ್ನು ಸಲ್ಲಿಸಿದ್ದು ತಕರಾರಿನ ಅಂಶಗಳು ಈ ಕೆಳಗಿನಂತೆ ಇರುವವು:

ಈ ಮೇಲ್ಮನವಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ 1 ಊರ್ಜಿತವಾಗಿರುವುದಿಲ್ಲ. ಪ್ರತಿವಾದಿಯರ ಆರ್ಥಿಕ ಪರಿಸ್ಥಿತಿ ಚೆನ್ನಾಗಿದ್ದರೂ ಕೂಡ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಪ್ರತಿವಾದಿಯರು ನ್ಯಾಯಾಲಯದ ಶುಲ್ಕ ರೂ.50/-ನ್ನು ಮಾತ್ರ ಪಾವತಿ ಮಾಡಿದ್ದು, ಇದು ದೊಡ್ಡ ಮೊತ್ತವಾಗಿರುವುದಿಲ್ಲ. ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಲು ಕಾನೂನಿನ ಅಡಿಯಲ್ಲಿ ಯಾವುದೇ ಬಲವಾದ ಕಾರಣಗಳು ಇರುವುದಿಲ್ಲ. ಆದ್ದರಿಂದ ಈ ಅರ್ಜಿಯನ್ನು ಖರ್ಚು ಸಹಿತ ತಿರಸ್ಕರಿಸಬೇಕೆಂದು ವಿನಂತಿಸಿಕೊಂಡಿರುವರು.

4. ಈ ಅರ್ಜಿಯಲ್ಲಿನ ಸಂಗತಿಗಳನ್ನ ರುಜುವಾತುಪಡಿಸಲು 2 ನೇ ಮೇಲ್ಮನವಿದಾರರು ಉಳಿದ ಮೇಲ್ಮನವಿದಾರರ ಪರವಾಗಿ ತಮ್ಮನ್ನು ಪಿಡಬ್ಲ್ಯೂ-1 ಎಂದು ವಿಚರಣೆಗೊಳಪಡಿಸಿಕೊಂಡು ನಿಪಿ-1 ಮತ್ತು 2 ದಾಖಲೆಗಳನ್ನು ಗುರುತಿಸಿಕೊಂಡಿರುವರು. ಎದುರುದಾರರು ತಮ್ಮ ಪರವಾಗಿ ಯಾವುದೇ ಸಾಕ್ಷಿಗಳನ್ನು ವಿಚಾರಣೆಗೊಳಪಡಿಸಿಕೊಂಡಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

5. ಮೇಲ್ಮನವಿದಾರರ ಮತ್ತು ಎದರುದಾರ ಪರ ವಕೀಲರ ವಾದವನ್ನು ಆಲಿಸಲಾಯಿತು. ಎದುರುದಾರ ಪರ ವಕೀಲರು ತಮ್ಮ ವಾದಕ್ಕೆ ಪೂರಕವಾಗಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ನಿರ್ದರಿತ ತೀರ್ಪುಜನ್ಯ ಕಾನೂನಾದ 2018(1) ಕೆ ಸಿ ಸಿ ಆರ್ 776 (ಕಸ್ತೂರಿಬಾಯಿ ಮತ್ತು ಇತರರು ವಿರುದ್ಧ ಗುರುಲಿಂಗಪ್ಪ ಮತ್ತು ಇನ್ನೊಬ್ಬರು) ನ್ನು ಅವಲಂಬಿಸಿರುವರು.

6. ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನನ್ನ ಸಮಾಲೋಚನೆಗೆ ಮೂಡಿ ಬಂದಿವೆ.

1. ಅರ್ಜಿದಾರರು ಸಲ್ಲಿಸಿರುವ ಕಾಲ ಪರಿಮಿತಿ ಅಧಿನಿಯಮ ಕಲಂ. 5 ರ ಅಡಿಯಲ್ಲಿನ ಅರ್ಜಿಯನ್ನು ಪುರಸ್ಕರಿಸಲು ಸಮಂಜಸವಾದ ಸಾಕಷ್ಟು ಕಾರಣಗಳು ಇರುವವೇ?

2. ಯಾವ ಆದೇಶ?

7. ಮೇಲಿರುವ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಕಂಡಂತೆ ಇರುತ್ತವೆ.

ಅಂಶ ನಂ. 1 : ಸಕಾರಾತ್ಮಕವಾಗಿ,

ಅಂಶ ನಂ. 1 : ಅಂತಿಮ ಆದೇಶದ ಪ್ರಕಾರ ಕೆಳಗಿನ ಕಾರಣಗಳಿಗಾಗಿ

ಕಾರಣಗಳು

8. <u>ಅಂಶ – 1</u>ಃ ಸದರಿ ಮೇಲ್ಮನವಿಯನ್ನು ಒಪ್ಪಿಕೊಂಡಂತೆ ಮೇಲ್ಮನವಿದಾರರು ಅಸಲ ದಾವಾ ಸಂಖ್ಯೆಃ 249/2013 ರ ದಿನಾಂಕಃ 27.02.2019 ರಲ್ಲಿ ವಿಚಾರಣಾ ನ್ಯಾಯಾಲಯದಲ್ಲಿ ಆದ ತೀರ್ಪು ಮತ್ತು ಡಿಕ್ರಿಯನ್ನು ಪ್ರಶ್ನಿಸಿ ಸಲ್ಲಿಸಿದ್ದು, ಈ ಮೇಲ್ಮವಿಯನ್ನು ಸಲ್ಲಿಸಲು 1516 ದಿನಗಳ ವಿಳಂಬವಾಗಿದ್ದು, ಈ ವಿಳಂಬವನ್ನು ಮನ್ನಾ ಮಾಡಲು ಕೋರಿ ಈ ಕಾಲಪರಮಿತಿ ಅಧಿನಿಯಮ ಕಲಂ.5 ರಡಿಯಲ್ಲಿ ಸಲ್ಲಿಸಿರುವರು. ಮೇಲ್ಮನವಿದಾರರಿಗೆ ನ್ಯಾಯಾಲಯದ ಶುಲ್ಕ ಹಾಗೂ ವಕೀಲರ ಫೀಯನ್ನು ನೀಡುವ ಆರ್ಥಿಕವಾಗಿ ಸಂಕಷ್ಟದಲ್ಲಿರುವುದರಿಂದ ತಮ್ಮ ವಕೀಲರನ್ನು ಬೇಟಿಯಾಗುವಲ್ಲಿ ವಿಳಂಬವಾಗಿದ್ದು ನಂತರದಲ್ಲಿ ಸದರಿ ಮೇಲ್ಮನವಿಯನ್ನು ಸಲ್ಲಿಸಿದ್ದು ಆ ಕಾರಣದಿಂದಾಗಿ ವಿಳಂಬವಾಗಿದ್ದು ಯಾವುದೇ ಉದ್ದೇಶಪೂರ್ಣಕ ಕಾರಣದಿಂದ ಸಕಾಲದಲ್ಲಿ ಮೇಲ್ಮನವಿಯನ್ನು ಸಲ್ಲಿಸುವುದನ್ನು ಬಿಟ್ಟಿರುವುದಿಲ್ಲ. ಆದ್ದರಿಂದ ಕಾಲವಿಳಂಬವನ್ನು ಮನ್ನಿಸಿ ಅರ್ಜಿಯನ್ನು ಪುರಸ್ಕರಿಸುವಂತೆ ವಿನಂತಿಸಿಕೊಂಡಿರುವರು.

9. ಕಾಲವಿಳಂಬದ ಅರ್ಜಿಯನ್ನು ತೀರ್ಮಾನಿಸುವ ಕುರಿತಂತೆ ನಿಯಮದ ಪ್ರಕಾರ ಮೇಲ್ಮನವಿದಾರರ ವಿಚಾರಣೆಗಾಗಿ ದಿನಾಂಕವನ್ನು ಗೊತ್ತುಪಡಿಸಿದ್ದು, 2 ನೇ ಮೇಲ್ಮನವಿದಾರ ಉಳಿದ ಮೇಲ್ಮನವಿದಾರರ ಪರವಾಗಿ ತನ್ನನ್ನು ಪಿಡಬ್ಲ್ಯೂ-1 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ತನ್ನ ಸಾಕ್ಷಿಯ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ತಮ್ಮ ಅರ್ಜಿಯಲ್ಲಿ ಹೇಳಿರುವ ಸಂಗತಿಗಳನ್ನೇ ಪುನರುಚ್ಚಿಸಿರುತ್ತಾರೆ. ಸದರಿ ಮೇಲ್ಮನವಿದಾರರ ವಿರುದ್ಧ ಎದುರುದಾರರು ಅಸಲು ದಾವಾ ಸಂಖ್ಯೆಃ 249/2013 ರ

ದಾವೆಯನ್ನು ಪಾಲು ವಿಭಾಗ ಕೋರಿ ದಾವೆಯನ್ನು ದಾಖಲು ಮಾಡಿದ್ದು, ಅದನ್ನು ವಿಚಾರಣಾ ನ್ಯಾಯಲಯದವರು ಭಾಗಶಃ ಡಿಕ್ರಿಗೊಳಿಸಿದ್ದು, ಅದರ ತೀರ್ಪು ಮತ್ತು ಡಿಕ್ರಿ ವಿರುದ್ದ ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಈ ಮೇಲ್ಮನವಿಯನ್ನು ಸಲ್ಲಿಸಲು ಒಟ್ಟು 1516 ದಿನಗಳ ಕಾಲ ವಿಳಂಬವಾಗಿದ್ದು, ಸದರಿ ಮೇಲ್ಮನವಿಯನ್ನು ಮನ್ನಿಸುವ ಕುರಿತಂತೆ ಸದರಿ ಅರ್ಜಿಯನ್ನು ಕಾಲಪರಿಮಿತಿ ಅಧಿನಿಯಮ ಕಲಂ.5 ರ ಅಡಿಯಲ್ಲಿ ಸಲ್ಲಿಸಿದ್ದು ಅಂತಾ ಹೇಳಿ ತಾವು ಯಾವುದೇ ಉದ್ದೇಶಪೂರ್ವಕವಾದ ಕಾರಣದಿಂದ ಮೇಲ್ಮನವಿಯನ್ನು ಸಲ್ಲಿಸಲು ವಿಳಂಬ ಮಾಡಿರುವುದಿಲ್ಲ. ಆದ್ದರಿಂದ ಈ ಅರ್ಜಿಯನ್ನು ಪುರಸ್ಕರಿಸಲು ವಿನಂತಿಸಿಕೊಂಕೊಂಡು ತಮ ಸಾಕ್ಷಕ್ಕೆ ಪೂರಕವಾಗಿ ನಿಪಿ-1 ಮತ್ತು 2 ದಾಖಲಗೆಳನ್ನು ಗುರುತಿಸಿಕೊಂಡಿರುತ್ತಾರೆ.

10. ನಿಪಿ - 1 ರ ದಾಖಲೆಯು ಪ್ರಧಾನ ದಿವಾನಿ ನ್ಯಾಯಾಲಯದ ಅಸಲ ದಾವಾ ಸಂಖ್ಯೆ-226/2022 ರ ವಾದ ಪತ್ರದ ನಕಲು ಪ್ರತಿಯಾಗಿರುವುದು. ನಿಪಿ - 2 ರ ದಾಖಲೆಯು ದಾವಾ ಸಂಖ್ಯೆ-226/2022 ರಲ್ಲಿ ಪ್ರತಿವಾದಿ 4 ರವರು ಸಲ್ಲಿಸಿದ ನಕಲು ಪತ್ರದ ಪ್ರತಿಯಾಗಿರುವುದು.

11. ಪಿಡಬ್ಲ್ಯೂ - 1 ರವರನ್ನು ಎದುರುದಾರ ಪರ ವಕೀಲರು ಪಾಟೀ ಸವಾಲಿಗೆ ಒಳಪಡಿಸಿದಾಗ, ಪಾಟೀ ಸವಾಲಿನಲ್ಲಿ ನುಡಿಯುವುದೇನೆಂದರೆ. ತನಗೆ ಸ್ವಂತ ವಾಹನವಿದ್ದು ತಾನು ಚಾಲಕನಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿಯಲ್ಲ. ಬೇರೆಯವರ ವಾಹಗಳಲ್ಲಿ ಚಾಲಕನಾಗಿ ಕೆಲಸಕ್ಕೆ ಹೋಗುತ್ತೇನೆ. ಒಂದು ವಿನಕ್ಕೆ ಚಾಲಕನಿಗೆ ರೂ.500/- ಗಳ ಸಂಬಳವನ್ನು ನೀಡುತ್ತಾರೆ. ಅಂದರೆ ಸರಿಯಲ್ಲ. ಒಬ್ಬರು ರೂ.200/- ರಿಂದ 300/- ನೀಡುತ್ತಾರೆ ಕೆಲವೊಬ್ಬರು ರೂ.400/- ಗಳ ಸಂಬಳವನ್ನು ನೀಡುತ್ತಾರೆ. ತಮ್ಮ ಮನೆತನದ

ಆಸ್ತಿಗಳಲ್ಲಿ ಪಾಲು ವಾಟ್ನಿ ಮಾಡಿಕೊಂಡ ಪ್ರಕಾರ ತನ್ನ ಪಾಲಿಗೆ ಎರಡು ಆಸ್ತಿಗಳು ಬಂದಿರುವವವು ಎಂದರೆ ಸರಿ. ಸಿ.ಟಿ.ಎಸ್.ನಂ.3573 ರ ಆಸ್ತಿಯಲ್ಲಿ ತಾನು ವಾಸವಾಗಿದ್ದು ಸಿ.ಟಿ.ಎಸ್.ನಂ.3575 ಬಾಡಿಗೆಗೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಿ.ಟಿ.ಎಸ್.ನಂ.3575 ರ ಆಸ್ತಿಯು ಮುಖ್ಯ ರಸ್ತೆಗೆ ಹೊಂದಿಕೊಂಡು ಇರುವುದರಿಂದ ಬಾಡಿಗೆಗೆ ನೀಡಿದ್ದು ಪ್ರತಿ ತಿಂಗಳು ರೂ.15,000/- ಬಾಡಿಗೆ ಬರುತ್ತದೆ ಎಂದರೆ ಸರಿಯಲ್ಲ. ಈ ಮೇಲ್ಮನವಿ ಸಲ್ಲಿಸಲು ಆದ ವಿಳಂಬಕ್ಕೆ ತನ್ನ ಆರ್ಥಿಕ ಪರಿಸ್ಥಿತಿ ಚೆನ್ನಾಗಿ ಇರುವುದಿಲ್ಲ ಎಂದು ಹೇಳಿ ಬರೆಸಿರುವೆನು ಅಂದರೆ ಸರಿ. ಆದರೆ ವಕೀಲರ ಫೀಜು ರೂ.20 ಸಾವಿರ ರೂಗಳನ್ನು ಬೇರೆಯವರ ಕಡೆಯಿಂದ ಸಾಲ ಮಾಡಿ ತಂದು ನೀಡಿರುವೆನು ಎಂದು ನುಡಿಯುತ್ತಾರೆ. ಈ ಮೇಲ್ಮನವಿಯನ್ನು ಅಲ್ಲಿಸಲು ನ್ಯಾಯಾಲಯಕ್ಕೆ ರೂ.50/- ಮಾತ್ರ ಸಂದಾಯ ಮಾಡಿರುವೆನು ಎಂದು ನುಡಿಯುತ್ತಾರೆ. ಆದರೆ ಎದುರುದಾರರಿಗೆ ಪೂರಕವಾಗಿರುವಂತಹ ಯಾವುದೇ ಸಮ್ಮತಿಯನ್ನು ಪಡೆದುಕೊಂಡಿರುವುದಿಲ್ಲ.

12. ಸಮಾನ್ಯವಾಗಿ ಮೇಲ್ಮನವಿಯನ್ನು ಸಲ್ಲಿಸಲು ಕಾಲ ವಿಳಂಬವಾದ ಸಮಯದಲ್ಲಿ ನ್ಯಾಯಾಂಗವನ್ನು ತಾಂತ್ರಿಕ ಕಾರಣಗಳ ಮೇಲೆ ಅನ್ಯಾಯವನ್ನು ಕಾನೂನು ಸಮ್ಮತಿಗೊಳಿಸುವ ಅದರ ಕಾರಣದಿಂದಾಗಿ ಗೌರವಿಸುವುದಿಲ್ಲ. ಆದರೆ ಅನ್ಯಾಯಾವನ್ನು ತೊಡೆದು ಹಾಕುವ ಸಾಮರ್ಥ್ಯವನ್ನು ಹೊಂದಿದೆ ಮತ್ತು ಹಾಗೆ ಮಾಡಲು ನಿರೀಕ್ಷಿಸಲಾಗಿದೆ ಎಂಬುದನ್ನು ಮಾನ್ಯ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯ ಎ.ಆಯ್.ಆರ್. 1987 ಎಸ್.ಸಿ.1358 **(ಕಲೆಕ್ಟರ, ಭೂಅರ್ಜನೆ ಅನಂತನಾಗ ಮತ್ತು ಇನ್ನೊಬ್ಬರು ವಿರುದ್ಧ ಮ**

**ಖತೀಜಾ ಮತ್ತು ಇತರರು)** ಮೊಕದ್ದಮೆಯಲ್ಲಿ ಈ ಮಾರ್ಗದರ್ಶಕ ನಿಯಮಗಳನ್ನು ವಿಧಿಸಿರುವರು.

1. ಸಾಮಾನ್ಯವಾಗಿ ಅಪೀಲನ್ನು ತಡವಾಗಿ ಸಲ್ಲಿಸಿರುವುದಂದ ಕಕ್ಷಿಗಾರನಿಗೆ ಯಾವುದೇ ಪ್ರಯೋಜನವಾಗಲಾರದು.

2. ವಿಳಂಬವನ್ನು ಮನ್ನಾ ಮಾಡಲು ನಿರಾಕರಿಸುವುದರ ಪರಿಣಾಮವಾಗಿ ಅರ್ಹವಾದ ವಿಷಯವನ್ನು ಪ್ರಾರಂಭದಲ್ಲಿಯೇ ಅಂಗೀಕರಿಸದಂತಾಗಬಹುದು ಮತ್ತು ನ್ಯಾಯಾವು ವಿಫಲಗೊಳ್ಳಬಹುದು. ಇದಕ್ಕೆ ವಿರುದ್ದವಾಗಿ ವಿಳಂಬವನ್ನು ಮನ್ನಾ ಮಾಡಿದಾಗ ಹೆಚ್ಚೆಂದರೆ ಪಕ್ಷಕಾರರನ್ನು ಆಲಿಸಿದ ತರುವಾಯ ಮೊಕದ್ದಮೆಯನ್ನು ಗುಣಾವಗುಣಗಳ ಆಧಾರದ ಮೇಲೆ ತೀರ್ಮಾನಿಸಬಹುದು.

3. ಪ್ರತಿಯೊಂದು ದಿವಸದ ವಿಳಂಬವನ್ನು ವಿವರಿಸತಕ್ಕದ್ದು ಎಂಬುದರ ಅರ್ಥ ಕಟ್ಟುನಿಟ್ಟಾದ ಮಾರ್ಗವನ್ನು ಅನುಸರಿಸತಕ್ಕದ್ದು ಎಂಬುದಾಗಿರುವುದಿಲ್ಲ. ಪ್ರತಿ ಗಂಟೆಯ ಪ್ರತಿ ಸೆಕೆಂಡಿನ ವಿಳಂಬವನ್ನು ಏಕೆ ವಿವರಿಸಬಾರದು? ಇಲ್ಲಿ ನಿಯಮವನ್ನು ವ್ಯಾವಹಾರಿಕ ರೀತಿಯಲ್ಲಿ ಯುಕ್ತಾಯುಕ್ತವಾಗಿ ವಿವೇಚಿಸಿ ಅನ್ವಯಿಸತಕ್ಕದ್ದು.

4. ಗಣನೀಯ ನ್ಯಾಯ ಮತ್ತು ತಾಂತ್ರಿಕ ಪರಗಣನಾಂಶಗಳನ್ನು ಪರಸ್ಪರ ವಿರುದ್ಧ ತೋಡಿಕೊಂಡಿರುವಾಗ ಇತರ ಪಕ್ಷದವರಿಗೆ ಗಣನೀಯ ನ್ಯಾಯದ ಕಾರಣವನ್ನು ಹೂಡುವುದು ಅಪೇಕ್ಷಣೀಯವಾಗಿದ್ದು, ಉದ್ದೇಶರಹಿತ ವಿಳಂಬದಿಂದಾಗಿ ಅನ್ಯಾಯವನ್ನು ಮಾಡಲಾಗುತ್ತಿದ್ದು ಹಕ್ಕು ನಿಹಿತವಾಗಿದೆಯೆಂದು ಹಕ್ಕೊತ್ತಾಯ ಮಾಡಲಾಗದು.

5. ಉದ್ದೇಶಪೂರ್ವಕವಾಗಿ ಅಥವಾ ಶಿಕ್ಷಾರ್ಹ ಉಪೇಕ್ಷೆಯ ಕಾರಣದಿಂದಾಗಿ ಅಥವಾ ದುರ್ಭಾವನೆಯ ಕಾರಣದಿಂದಾಗಿ ವಿಳಂಬವು ಸಂಭವಿಸುವುದೆಂಬ ಯಾವುದೇ ಪೂರ್ವಭಾವನೆ ಇರುವುದಿಲ್ಲ ವಿಳಂಬವಾಗುವುದನ್ನು ಅವಲಂಬಿಸುವ ಮೂಲಕ ಕಕ್ಷಿಗಾರನಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ವಾಸ್ತವವಾಗಿ ಆತನು ತೀವ್ರ ತೊಂದರೆಯನ್ನು ಎದುರಿಸಬೇಕಾಗಿರುತ್ತದೆ.

6. ತಾಂತ್ರಿಕ ಆಧಾರಗಳ ಮೇಲೆ ಅನ್ಯಾಯವನ್ನು ಕಾನೂನು ಸಮ್ಮತಗೊಳಿಸಲು ನ್ಯಾಯಾಂಗವು ಅಧಿಕಾರವನ್ನು ಹೊಂದಿರುವ ಕಾರಣದಿಂದಾಗಿ ಗೌರವಿಸಲಾಗುವುದಿಲ್ಲ, ಆದರೆ ಅದು ಅನ್ಯಾಯವನ್ನು ತೆಗೆದು ಹಾಕಲು ಸಮರ್ಥವಾಗಿರುವುದರಿಂದ ಮತ್ತು ಹಾಗೆ ಮಾಡಬೇಕೆಂದು ಅಪೇಕ್ಷಿಸಲಾಗಿರುವುದರಿಂದ ಗೌರವಿಸಲಾಗುತ್ತದೆಂಬುದನ್ನು ಅರಿಯಬೇಕು. ಈ ನಿಟ್ಟಿನಲ್ಲಿ ಯಥಾದೃಷ್ಟಿಯ ನ್ಯಾಯಾಧಾರಿತ ಮಾರ್ಗವನ್ನು ಅನುಸರಿಸುವುದಕ್ಕಾಗಿ ಅಪೀಲನ್ನು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡುವುದಕ್ಕಾಗಿ ಪರ್ಯಾಪ್ತ ಕಾರಣವಿತ್ತು, ಮನ್ನಾವನ್ನು ಕೋರುತ್ತಿರುವುದು ರಾಜ್ಯ ಸರ್ಕಾರವಾಗಿದ್ದು ಅದು ಖಾಸಗಿ ಪಕ್ಷಕಾರನಲ್ಲವೆಂಬುದು ಪೂರ್ತಿಯಾಗಿ ಅಪ್ರಕೃತವಾಗಿತ್ತು, ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬ ತತ್ವವು ಕಕ್ಷಿಗಾರನಾಗಿರುವ ರಾಜ್ಯ ಸರ್ಕಾರವೂ ಸೇರಿದಂತೆ ಎಲ್ಲಾ ಕಕ್ಷಿಗಾರರನ್ನು ಸಮಾನವಾಗಿ ಕಾಣಬೇಕೆಂದು ಹಾಗೂ ಕಾನೂನನ್ನು ನಿಷ್ಪಕ್ಷಪಾತವಾದ ರೀತಿಯಲ್ಲಿ ಅನ್ವಯಿಸಬೇಕೆಂದು ಬಯಸುತ್ತದೆ. ವಿಳಂಬವನ್ನು ಮನ್ನಾ ಮಾಡಬೇಕೆಂದು ಕೋರುವ ಅರ್ಜಿದಾರ ರಾಜ್ಯ ಸರ್ಕಾರವಾಗಿರುವಾಗ ಮಲತಾಯಿ ವರ್ತನೆಯನ್ನು ತೋರುವುದು ಅಪೇಕ್ಷಣೀಯವಾಗಿರುವುದಿಲ್ಲ, ವಾಸ್ತವವಾಗಿ ವ್ಯಕ್ತಿಗತವಾಗಿಲ್ಲದ ಕಾರ್ಯವೈಖರಿಯ ಕಾರಣದಿಂದಾಗಿ (ಅಪೀಲಿಗೆ ಒಳಪಡಿಸಬೇಕೆಂದು ಕೋರಲಾಗಿರುವ ತೀರ್ಪಿನಿಂದ

ವಿಷಯದ ಪ್ರಭಾರವನ್ನು ಹೊಂದಿರುವ ಯಾರೊಬ್ಬರಿಗೂ ನೇರವಾಗಿ ಪೆಟ್ಟಾಗುವುದಿಲ್ಲ ಅಥವಾ ತೊಂದರೆಯಾಗುವುದಿಲ್ಲ) ಮತ್ತು ಪರಂಪರಾಗತವಾಗಿ ನಡೆದು ಬಂದಿರುವ ಅಧಿಕಾರ ವರ್ಗ ಪದ್ಧತಿಯ ಟಿಪ್ಪಣಿ ಮಾಡುವುದರಲ್ಲಿ ಕಡತವನ್ನು ವಿಳಂಬಮಾಡುವಲ್ಲಿ ಮತ್ತು ಮೇಲೆ ಕಳುಹಿಸುವಲ್ಲಿ ತ್ವರೆ ಮಾಡಲು ಪ್ರೇರೆಪಿಸುವುದು ಅನುಮೋದಿಸುವುದು ಹೆಚ್ಚು ಕಷ್ಟಕರವಾಗಿದ್ದಾಗ್ಯೂ ಅದರ ವಿಳಂಬವನ್ನು ಅರ್ಥಮಾಡಿಕೊಳ್ಳುವುದು ಕಷ್ಟಕರವಲ್ಲ ಎಂಬುದು ಅನುಭವದಿಂದ ವಿದಿತವಾಗುತ್ತದೆ. ಯಾವುದೇ ಸಂದರ್ಭದಲ್ಲಿ ಸಮುದಾಯದ ಒಟ್ಟಾರೆ ಉದ್ದೇಶವನ್ನು ಪ್ರತಿನಿಧಿಸುವ ರಾಜ್ಯ ಸರ್ಕಾರವು ಕಕ್ಷಿಗಾರನ ವ್ಯಕ್ತಿಗತ ಸ್ಥಾನಮಾನವನ್ನು ಪಡೆಯಲು ಅರ್ಹವಾಗಿರುವುದಿಲ್ಲ. ಆದುದರಿಂದ ನ್ಯಾಯಾಲಯಗಳಿಗೆ ಪರ್ಯಾಪ್ತಕಾರಣ ಪದಾವಳಿಯ ಅರ್ಥ ವಿವರಣಾ ಕ್ರಮದಲ್ಲಿ ಆ ನಿಬಂಧದ ಸತ್ವ ಮತ್ತು ತತ್ವವನ್ನು ತಿಳಿಸಬೇಕಾಗಿರುತ್ತದೆ. ಹಾಗೆಯೇ ಗುಣಾವಗುಣಗಳನ್ನು ಆಧರಿಸಿದ ತಿರ್ಪನ್ನು ಬಿಟ್ಟು ಬಿಡುವ ಮಾರ್ಗವನ್ನು ಅನುಸರಿಸುವುದಕ್ಕಿಂತ ಗುಣಾವಗುಣಗಳನ್ನು ಆಧರಿಸಿ ನಿಷ್ಪಕ್ಷಪಾತವಾದ ನ್ಯಾಯವನ್ನು ಅನುಸರಿಸಬೇಕೆಂಬುದನ್ನು ಅಂತಿಮವಾಗಿ ದೃಷ್ಟಿಯಲ್ಲಿರಿಸಿ ಕೈಯಲ್ಲಿರುವ ವಿಷಯಗಳಿಗೆ ಅದನ್ನು ಅನ್ವಯಿಸುವಲ್ಲಿ ಅದೇ ಮಾರ್ಗವನ್ನು ಅನುಸರಿಸಬೇಕಾಗಿರುತ್ತದೆ. ಪ್ರಸ್ತುತ ಅಪೀಲಿಗೆ ಎಡೆ ಮಾಡಿಕೊಟ್ಟಿರುವ ವಿಷಯದ ಸಂಗತಿಗಳ ಕಡೆಗೆ ತಿರುಗಿದರೆ ವಿಳಂಬಕ್ಕೆ ಸಂಬಂಧಿಸಿದಂತೆ ಸಾಕಷ್ಟು ಕಾರಣವಿತ್ತೆಂಬುದಾಗಿ ನಮಗೆ ಮನವರಿಕೆಯಾಗಿರುತ್ತದೆ. ಆದುದರಿಂದ ಸಮಯ ಮೀರಿತೆಂಬುದಾಗಿ ತನ್ನ ಮುಂದಿರುವ ಅಪೀಲನ್ನು ವಜಾ ಮಾಡಿರುವ ಉಚ್ಚ ನ್ಯಾಯಾಲಯದ ಆಜ್ಞೆಯನ್ನು ರದ್ದುಪಡಿಸಲಾಗಿದೆ. ವಿಳಂಬವನ್ನು ಮನ್ನಾಮಾಡಲಾಗಿದೆ ಹಾಗೂ ಈ ವಿಷಯವನ್ನು ಉಚ್ಚ ನ್ಯಾಯಾಲಯಕ್ಕೆ ಹಿಂದಕ್ಕೆ ಕಳುಹಿಸಲಾಗಿದೆ.

ಈಗ ಉಚ್ಚ ನ್ಯಾಯಾಲಯ ಉಭಯ ಪಕ್ಷಗಾರರಿಗೆ ಆಲಿಕೆಯ ಸೂಕ್ತ ಅವಕಾಶವನ್ನು ನಿಡಿದ ತರುವಾಯ ಗುಣಾವಗುಣಗಳ ಆಧಾರ ಮೇಲೆ ವಿಲೆ ಮಾಡಬೇಕಾಗಿರುತ್ತದೆ.

13. ಈ ಮೇಲೆ ಹೇಳಿದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳ ನಿರೂಪಿಸಿದ ಸಾಸ್ಥಾಪಿತ ಕಾನೂನಿನ ಅಡಿಯಲ್ಲಿ ನ್ಯಾಯದೃಷ್ಟಿಯಳ್ಳ ಕ್ರಮವನ್ನು ಮಾಡುವಲ್ಲಿ ಮೇಲ್ಮನವಿಯನ್ನು ದಾಖಲು ಮಾಡಲು ವಿಳಂಬವನ್ನು ಮನ್ನಾ ಮಾಡಲು ಸಾಕಷ್ಟು ಕಾರಣ ಇತ್ತು ಎಂಬುದನ್ನು ಪರಿಶೀಲಿಸಬೇಕಾಗುವುದು. ಸದರಿ ಪ್ರಕರಣದಲ್ಲಿ ಮೇಲ್ಮನವಿದಾರನ ಆರ್ಥಿಕ ಪರಿಸ್ಥಿತಿ ಕಷ್ಟಕರವಾಗಿರುವುದರಿಂದ ಈ ಮೇಲ್ಮನವಿಯನ್ನು ಸಲ್ಲಿಸಲು ವಿಳಂಬವಾಗಿದ್ದು, ಈ ಸಂಗತಿಯನ್ನು ಎದುರುದಾರರು ಸ್ಪಷ್ಟವಾಗಿ ನಿರಾಕರಿಸಿದ್ದು ಸದರಿ ಅರ್ಜಿಗೆ ತಮ್ಮ ತಕರಾರನ್ನು ಸಲ್ಲಿಸಿರುವರು. ಆದರೆ ಈ ಮೇಲ್ಮನವಿಯನ್ನು ವಜಾಗೊಳಿಸಲು ಸೂಕ್ತವಾದ ಕಾರಣಗಳು ಕಂಡುಬರುವುದಿಲ್ಲ. ಆದ್ದರಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸೂಚಿಸಿರುವಂತೆ ಸಮೂಚಿತ ಮತ್ತು ವಿಶಿಷ್ಟ ಮೊಕ್ಕದ್ದಮೆಗಳಲ್ಲಿ ಮಾತ್ರ ಕಾಲ ಪರಿಮಿತಿ ಅಧಿನಿಯಮದ 5 ನೇ ಪ್ರಕಾರಣವು ವಿಳಂಬವನ್ನು ಮನ್ನಾ ಮಾಡಲು ನ್ಯಾಯಾಲಯಕ್ಕೆ ವಿವೇಚನ ಅಧಿಕಾರವನ್ನು ನೀಡುವುದು ಹಾಗಾ ಆ ವಿವೇಚನಾಧಿಕಾರವನ್ನು ನ್ಯಾಯೋದ್ದೇಶವನ್ನು ಪಾಲಿಸುವ ಸಲುವಾಗಿ ಉಪಯೋಗಿಸಬೇಕಾಗಿರುವುದು. ಸದರಿ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯವು ವಾದಿಯ ದಾವೆಯನ್ನು ಭಾಗಶಃ ಡಿಕ್ರಿಗೊಳಿಸಿದ್ದು ಆ ಕಾರಣಕ್ಕಾಗಿ ಈ ಮೇಲ್ಮನವಿಯನ್ನು ಸಲ್ಲಿಸಿರುವರು. ಈ ಪ್ರಕರಣದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿದಲ್ಲಿ ಎದುರುದಾರರಿಗೆ ಯಾವುದೇ ರೀತಿಯಾದ ನಷ್ಟ ಹಾನಿ ಉಂಟಾಗುವುದಿಲ್ಲವೆಂದು ಪರಿಗಣಿಸಿ

ಈ ವಿಳಂಬವನ್ನು ಹಣದ ರೂಪದಲ್ಲಿ ದಂಡವನ್ನು ಹಾಕುವ ಮೂಲಕ ಸರಿದೂಗಿಸಬಹುದಾಗಿದೆ ಎಂದು ಪರಿಗಣಿಸಿ, ಈ ಅಂಶ 1 ನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

14. ಅಂಶ ನಂ. 2 : ಈ ಮೇಲೆ ಚರ್ಚಿಸಿದ ಅಂಶಗಳ ಆಧಾರದ ಮೇಲೆ ಕೆಳಗಿನಂತೆ:

## ಆದೇಶ

ವಾದಿಯರು/ಮೇಲ್ಮನವಿದಾರರು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:1 ನ್ನು ಕಾಲಪರಿಮಿತಿ ಅಧಿನಿಯಮ ಕಲಂ.5 ರ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ರೂ.2000/- ಖರ್ಚಿನೊಂದಿಗೆ ಪುರಸ್ಕರಿಸಲಾಗಿದೆ.

(ನನ್ನ ಉಕ್ತ ಲೇಖನದಂತೆ ಶೀಘ್ರಲಿಪಿಗಾರಳು ಬೆರಳಚ್ಚು ಮಾಡಿದ ನಂತರ ಅದನ್ನು ಓದಿ ತಪ್ಪುಗಳನ್ನು ತಿದ್ದಿದ ನಂತರ ತೆರೆದ ನ್ಯಾಯಾಲಯದಲ್ಲಿ ಈ ದಿನ ದಿನಾಂಕ: 8 ನೇ ಜುಲೈ 2025 ರಂದು ಘೋಷಿಸಲಾಯಿತು.)

## ಅನುಸೂಚಿ

1. ಮೇಲ್ಮನವಿದಾರರ ಪರ ಸಾಕ್ಷಿದಾರರ ಪಟ್ಟಿ:-

ಪಿ.ಡಬ್ಲ್ಯೂ -1 : ಶ್ರೀ.ಕಾಶೀನಾಥ ತಂದೆ ಶಂಕ್ರಯ್ಯಾ ಗೋವಿಂದಪೂರಮಠ

2. ಎದುರುದಾರರ ಪರ ಸಾಕ್ಷಿದಾರರ ಪಟ್ಟಿ:-

- ಯಾರೂ ಇಲ್ಲಾ -

3. ಮೇಲ್ಮನವಿದಾರರ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿ:-

ನಿಪಿ-1 : ಅಸಲ ದಾವಾ ನಂ.226/2022 ರ ವಾದ ಪತ್ರದ ನಕಲು ಪ್ರತಿ
ನಿಪಿ-2 : ಅಸಲ ದಾವಾ ನಂ.226/2022 ರ ಲಿಖಿತ ಪತ್ರದ ನಕಲು ಪ್ರತಿ

4. ಎದುರುದಾರರ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿಃ-

- ಏನೂ ಇಲ್ಲಾ -

(ವಿಜಯಕುಮಾರ.ಎಮ್.ಕನ್ನೂರ)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು ಮುಧೋಳ.

VIJAYAKUMAR KANNUR
Digitally signed by VIJAYAKUMAR KANNUR
Date: 2025.07.11 16:49:55 +0530